ಡಾ. ರಾಯಪ್ಪನವರಿಗೆ ಊಟ ಉಪಾಹಾರದ ವ್ಯವಸ್ಥೆ ಕಲ್ಪಿಸಿದ್ದರು. ಡಾ.ರಾಯಪ್ಪನವರ ಹೆಂಡತಿ ಸೀತಾಪುರಕ್ಕೆ ಬಂದ ಮೇಲೆ ಅವರ ಮಗುವನ್ನು ನೋಡಿಕೊಳ್ಳಲು ಕುಪ್ಪಣ್ಣಯ್ಯ ಸೀತಜ್ಜಿಯನ್ನು ನೇಮಿಸಿಕೊಟ್ಟಿದ್ದರು. ಇದರಿಂದ ರಾಯಪ್ಪ ದಂಪತಿಗೆ ಕುಪ್ಪಣ್ಣಯ್ಯನವರೆಂದರೆ ಪ್ರೀತಿ ಮತ್ತು ಗೌರವ.

ಹೊಟೇಲಿನ ವ್ಯವಹಾರ ಮುಗಿಸಿ ಕುಪ್ಪಣ್ಣಯ್ಯ ರಾತ್ರಿ ಎಂಟು ಗಂಟೆಯ ಸುಮಾರಿಗೆ ಡಾ. ರಾಯಪ್ಪನವರ ಮನೆಯ ಕಾಲಿಂಗ್ ಬೆಲ್ ಒತ್ತಿದರು. ಹೊರಗೆ ಬಂದ ರಾಯಪ್ಪನವರು 'ಓ, ಕುಪ್ಪಣ್ಣಯ್ಯ ಬನ್ನಿ ಸ್ವಾಮಿ, ಬನ್ನಿ' ಎಂದು ಸ್ವಾಗತಿಸಿದರು.

ಕುಪ್ಪಣ್ಣಯ್ಯ ನಿಧಾನವಾಗಿ ರಾಯಪ್ಪನವರ ಕ್ವಾರ್ಟ್ರಸ್‌ನ ಒಳಗೆ ಕಾಲಿಟ್ಟ ಒಡನೆಯೇ 'ಹೇಗಿದ್ದೀರಿ ರಾಯರೇ?' ಎಂದು ಅವರ ಶ್ರೀಮತಿಯೂ ಮುಗುಳ್ನಕ್ಕರು. ಕುಪ್ಪಣ್ಣಯ್ಯ 'ಚೆನ್ನಾಗಿದ್ದೇನೆ' ಏನ್ನುತ್ತಾ ಅಲ್ಲಿದ್ದ ಒಂದು ಸೋಫಾದ ತುದಿಯಲ್ಲಿ ಕುಳಿತುಕೊಳ್ಳುತ್ತಿದ್ದಂತೆ ರಾಯಪ್ಪನವರು ಹೊಟೇಲಿನವರಾದ ನಿಮಗೆ ಬಾಯಾರಿಕೆ ಕೇಳಬೇಕಾಗಿಲ್ಲವಷ್ಟೇ?'ಎಂದು ಮುಜಗರಪಡುತ್ತಾ ಪ್ರಶ್ನಿಸಿದರು. 'ಅದೆಲ್ಲ ಬೇಕಿಲ್ಲ' ಎಂದು ಮುಖ್ಯ ವಿಚಾರಕ್ಕೆ ಬರಬೇಕೆನ್ನುವಂತೆ ಕುಪ್ಪಣ್ಣಯ್ಯನವರು ದಾಸುಭಟ್ರಿಗೆ ಬೆಕ್ಕು ಕಡಿದ ಪ್ರಕರಣವನ್ನು ಮುಂದಿಟ್ಟು, 'ನೀವು ರೇಬೀಸ್ ಇಂಜೆಕ್ಷನ್ ಕೊಡಲಿಕ್ಕೆ ಆಗುವುದಿಲ್ಲ ಎಂದಿರಂತೆ. ಹೌದು, ನನಗೂ ಹಾಗೆ ಅನಿಸಿದೆ! ಆ ಬೆಕ್ಕು ಆಕಸ್ಮಿಕವಾಗಿ ಕಚ್ಚಿದ್ದು. ಹಾಗಾಗಿ ಅದು ರೇಬೀಸಿನ ಬೆಕ್ಕಲ್ಲ. ಓಡಿ ಹೋದದ್ದೇ ಆದರೆ ಅದು ಮತ್ತೆ ಬರಬಾರದೆಂದಿಲ್ಲವಲ್ಲ' ಎಂದು ಹೇಳುತ್ತಾ 'ಅವರ ತಲೆಯೊಳಗೆ ಈಗಾಗಲೇ ರೇಬೀಸ್ ಬಂದ ಹಾಗೆ ಆಗಿದೆ. ಅದಕ್ಕೆ ಏನು ಪರಿಹಾರ ಎಂದು ನನಗೆ ಹೊಳೆಯದು. ನೀವೇ ಹೇಳಬೇಕು' ಎಂದರು.

ರಾಯಪ್ಪ, 'ನೋಡಿ, ನಮ್ಮಲ್ಲಿ ಒಂದು ಮಾತಿದೆ: ರೋಗಕ್ಕೆ ಚಿಕಿತ್ಸೆ ಕೊಡಬಹುದು, ರೋಗಿಗೆ ಅಲ್ಲ! ನಿಮ್ಮ ದಾಸುಭಟ್ರ ತಲೆಯಲ್ಲಿ ನಾಳೆ ತನಗೆ ರೇಬೀಸ್ ಬಂದೇ ಬರುತ್ತದೆ ಎಂಬ ಮನೋಭಾವ ಇದ್ದಂತಿದ್ದರೆ ಕಷ್ಟ! ಆದರೆ ನಾನು ಇದಕ್ಕಾಗಿ ರ‍್ಯಾಬಿಪ್ರೂರ್ (Anti Rabies vaccination) ಇಂಜೆಕ್ಷನ್ ಕೊಡದೆ, 'ಪ್ಲಾಸಿಬೋ' ಚಿಕಿತ್ಸೆ ಕೊಡಬಹುದು. ಇದೊಂದು ಮಾನಸಿಕ ಚಿಕಿತ್ಸೆ. ಇದು ಸೈಕೋ ಸೊಮೋಟಿಕ್ ಡಿಸೀಸ್‌ಗಳಲ್ಲಿ ತುಂಬಾ ಮಹತ್ವದ್ದು. ಅಂದರೆ ಯಾವುದೇ ರೋಗಿಯಲ್ಲಿ ತನಗೆ ಇಂಥ ಕಾಯಿಲೆ ಇದೆ ಎಂಬ ಭ್ರಮೆ ಉಂಟಾಗಿ ನಿಜವಾಗಿಯೂ ಆತನಲ್ಲಿ ಅದು ಇಲ್ಲದಿದ್ದರೆ, ವಿಟಮಿನ್ ಮಾತ್ರೆಗಳಂತವುಗಳನ್ನು ಇಂಜೆಕ್ಷನ್ ರೂಪದಲ್ಲೋ ಮಾತ್ರೆಗಳ ರೂಪದಲ್ಲೋ ಕೊಟ್ಟು ಇದು 'ಅದ್ಭುತ ಪರಿಣಾಮಕಾರಿ' ಎಂದು ಅವರನ್ನು ಮೆಚ್ಚಿಸುವುದು. ಅನೇಕ ಸಂದರ್ಭಗಳಲ್ಲಿ 'ಇದು ತುಂಬಾ ಪರಿಣಾಮಕಾರಿ'. ಅಂದರೆ ಔಷಧ ಅಲ್ಲದ ಹಾನಿಕಾರಕವಲ್ಲದ ವಿಟಮಿನ್‌ಗಳಂತವುಗಳನ್ನು ಕೊಡುವುದು! ಇಂಥ ಚಿಕಿತ್ಸೆಗೆ 'ಪ್ಲಾಸಿಬೋ', ಅಂದರೆ 'ಐ ಪ್ಲೀಸ್' ಅರ್ಥಾತ್ 'ನನ್ನನ್ನು ನಾನೇ ಖುಷಿಪಡಿಸಿಕೊಳ್ಳುವುದು' ಅಂಥ ಅರ್ಥ. ಆ ನೆಲೆಯಲ್ಲಿ ನಾನು ಅವರಿಗೆ ರ‍್ಯಾಬಿಪ್ರೂರ್ ಇಂಜೆಕ್ಷನ್ ಕೊಡುವ ಬದಲು ಅದೇ ಡೋಸಿನಲ್ಲಿ ಬೇರೆ ಇಂಜೆಕ್ಷನನ್ನು ಕೊಡಬಹುದು. ರೇಬೀಸ್ ಇರುವ ಪ್ರಾಣಿ ಪಕ್ಷಿಗಳು (ನಾಯಿ, ಬೆಕ್ಕು, ಮೊಲ, ದನಕರು ಬಾವಲಿ ಇತ್ಯಾದಿ) ಕಡಿದಾಗ, ಕಡಿಸಿಕೊಂಡವನು, ಕಡಿಸಿಕೊಂಡ ದಿನ ಇಲ್ಲವೇ ರೇಬಿಪ್ರೂರ್ ಇಂಜೆಕ್ಷನ್ ತೆಗೆದುಕೊಂಡ ದಿನದಿಂದ ಒಂದು, ಮೂರು, ಏಳು, ಹದಿನಾಲ್ಕು, ಇಪ್ಪತ್ತೆಂಟು ಮತ್ತು ತೊಂಬತ್ತು ದಿನಗಳಲ್ಲಿ ಆರು ಬಾರಿ ಆ ಇಂಜೆಕ್ಷನ್ ತೆಗೆದುಕೊಳ್ಳಬೇಕು. ಇದು, ಹುಚ್ಚು ಹಿಡಿದ ಪ್ರಾಣಿ, ಪಕ್ಷಿ ಕಡಿದಾಗ ಅತಿ ಅಗತ್ಯ. ಆದರೆ ಸಣ್ಣ 'ಬೈಟ್' ಅಂದರೆ ಎರಡು, ಮೂರು ಸಣ್ಣ ಗಾಯ ಆಗಿದ್ದರೆ ಅಷ್ಟು ಬೇಡ, ಮುಖ ಮತ್ತು ಮಣಿಗಂಟು ಮತ್ತು ಮೊಣಕೈಗಂಟಿನ ಕೆಳಗೆ ಗಾಯ ಆಗಿದ್ದರೆ, ಆರು ಡೋಸು ಬೇಕೇ ಬೇಕು. ಅದನ್ನು ಕಡಿತದ ದಿನದಿಂದಲೇ ಪ್ರಾರಂಭಿಸುವುದು ಸೇಫ್' ಎಂದರು.

'ಓಹೋ!' ಎಂದು ಬೆರಗಾದ ಕುಪ್ಪಣ್ಣಯ್ಯ 'ಈಗ ದಾಸುಭಟ್ರನ್ನು ಏನು ಮಾಡೋಣ' ಎಂದು ಕುತೂಹಲದಿಂದ ಪ್ರಶ್ನಿಸಿದರು.

ಡಾ. ರಾಯಪ್ಪನವರು 'ನನ್ನ ದೃಷ್ಟಿಯಲ್ಲಿ ಈಗಾಗಲೇ ನಾನು ಹೇಳಿದ ಹಾಗೆ ದಾಸುಭಟ್ರಿಗೆ ರೇಬೀಸ್ ಬೆಕ್ಕಿನ ಕಡಿತ ಅಲ್ಲ. ಯಾಕೆಂದರೆ ಬೆಕ್ಕು ಓಡಿ ಹೋದ ಮಾತ್ರಕ್ಕೆ ಅದು ಸತ್ತಿದೆ ಎಂದು ಅರ್ಥೈಸಲಿಕ್ಕೆ ಆಗುವುದಿಲ್ಲ. ಆದರೆ ಪ್ಲಾಸಿಬೋ ಚಿಕಿತ್ಸೆ ನೀಡಬಹುದು. ಅಂದರೆ, ಮೂರು ಇಂಜೆಕ್ಷನನ್ನು ಏಳು ದಿನಗೊಳಗೆ ನೀಡಿ